# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 2255 |
| 2) ಮಾನ್ಯ ಸದಸ್ಯರ ಹೆಸರು | : | ಶ್ರೀ ಸಿ.ಎನ್ ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| 3) ಉತ್ತರಿಸುವ ದಿನಾಂಕ | : | 26.03.2026 |
| 4) ಉತ್ತರಿಸುವ ಸಚಿವರು | : | ಗೃಹ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಪೊಲೀಸ್ ಸಿಬ್ಬಂದಿಗಳಿಗಾಗಿ ಒಟ್ಟು ಎಷ್ಟು ವಸತಿಗೃಹಗಳನ್ನು ನಿರ್ಮಿಸುವ ಗುರಿ ಹೊಂದಲಾಗಿದೆ; ಈ ಪೈಕಿ ಇದುವರೆಗೆ ಎಷ್ಟು ವಸತಿಗೃಹಗಳು ಪೂರ್ಣಗೊಂಡಿವೆ ಮತ್ತು ಇನ್ನು ಎಷ್ಟು ನಿರ್ಮಾಣ ಹಂತದಲ್ಲಿವೆ;</td><td>ರಾಜ್ಯದ ವಿವಿಧ ಸ್ಥಳಗಳಲ್ಲಿ "ಪೊಲೀಸ್ ಗೃಹ 2025" ಯೋಜನೆ ಅಡಿ 9,524 ಪೊಲೀಸ್ ಕಾನ್ಸ್‌ಟೇಬಲ್ ವಸತಿ ಗೃಹಗಳು ಹಾಗೂ 510 ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ವಸತಿ ಗೃಹಗಳು ಸೇರಿ ಒಟ್ಟು 10,034 ವಸತಿಗೃಹಗಳ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲು ರೂ.2000.00 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಲಾಗಿರುತ್ತದೆ.<br><br>ಈ ಯೋಜನೆಯಡಿ ಪೊಲೀಸ್ ವಸತಿಗೃಹಗಳ ಕಾಮಗಾರಿಗಳ ಪ್ರಗತಿಯ ವಿವರ ಈ ಕೆಳಕಂಡಂತಿದೆ:-<br><br>
<table>
<tr><th>ಹಂತ</th><th>ಕೈಗೆತ್ತಿಕೊಂಡಿರುವ ವಸತಿ ಗೃಹಗಳ ಸಂಖ್ಯೆ</th><th>ಪೂರ್ಣಗೊಂಡಿರುವ ವಸತಿ ಗೃಹಗಳ ಸಂಖ್ಯೆ</th><th>ಪ್ರಗತಿಯಲ್ಲಿರುವ ವಸತಿ ಗೃಹಗಳ ಸಂಖ್ಯೆ</th></tr>
<tr><td>ಹಂತ-1</td><td>1128</td><td>1128</td><td>-</td></tr>
<tr><td>ಹಂತ-2</td><td>996</td><td>868</td><td>128</td></tr>
<tr><td>ಹಂತ-3</td><td>636</td><td>380</td><td>256</td></tr>
<tr><td>ಹಂತ-4</td><td>1324</td><td>916</td><td>408</td></tr>
<tr><td>ಹಂತ-5</td><td>830 (628 ಪಿಸಿ ವಸತಿ ಗೃಹಗಳು ಮತ್ತು 202 ಪಿ.ಎಸ್.ಐ ವಸತಿ ಗೃಹಗಳು)</td><td>-</td><td>830</td></tr>
<tr><td>ಒಟ್ಟು</td><td>4914</td><td>3292</td><td>1622</td></tr>
</table>
</td></tr>
<tr><td>ಆ)</td><td>ಕರ್ನಾಟಕದ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಅಭಿವೃದ್ಧಿ ನಿಗಮದ ವತಿಯಿಂದ ಸುಂಟಿಕೊಪ್ಪದಲ್ಲಿ 3.64 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾದ ವಸತಿಗೃಹಗಳು ಉದ್ಘಾಟನೆಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಬಂದಿದೆ.</td></tr>
</table>

| | | |
|---|---|---|
| ಇ) | ಹಿಂದೆ ವಸತಿಗೃಹಗಳ ನಿರ್ಮಾಣಕ್ಕೆ 18 ಲಕ್ಷ ರೂ. ವೆಚ್ಚ ಮಾಡಲಾಗುತ್ತಿತ್ತು, ಈಗ ಇದನ್ನು 33 ಲಕ್ಷ ರೂ.ಗಳಿಗೆ ಹೆಚ್ಚಿಸಿರುವುದು ನಿಜವೇ; ಹಾಗಿದ್ದಲ್ಲಿ, ಈ ವೆಚ್ಚದ ಹೆಚ್ಚಳದಿಂದ ವಸತಿಗೃಹಗಳ ಗುಣಮಟ್ಟದಲ್ಲಿ ಕಂಡುಬಂದ ಸುಧಾರಣೆಗಳೇನು; | ಹೌದು. ವಸತಿಗೃಹಗಳ ನಿರ್ಮಾಣಕ್ಕೆ 18 ಲಕ್ಷ ರೂ. ವೆಚ್ಚ ಮಾಡಲಾಗುತ್ತಿತ್ತು, ಈಗ ಇದನ್ನು 33 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗಿರುತ್ತದೆ. 2016-17ನೇ ಸಾಲಿನ ಲೋಕೋಪಯೋಗಿ ಇಲಾಖೆ ದರಪಟ್ಟಿಯಂತೆ, ಸಾಮಾನ್ಯವಾಗಿ ಪ್ರತಿ ಕಟ್ಟಡ ವೆಚ್ಚವು ರೂ 18.00 ಲಕ್ಷಗಳಾಗಿರುತ್ತದೆ ತದನಂತರ ಪ್ರಾದೇಶಿಕ ಮಾನ್ಯತೆ ದರ ಪಟ್ಟಿ(Area Weightage Price List), GST ದರ ಹಾಗೂ ಪ್ರತಿ ವರ್ಷ ಆಗುವ ಬೆಲೆ ಏರಿಕೆ ಮತ್ತು ಲೋಕೋಪಯೋಗಿ ಇಲಾಖೆಯ ದರಪಟ್ಟಿಯ ಹೆಚ್ಚುವರಿಯಾದಂತೆ ನಿರ್ಮಾಣ ವೆಚ್ಚವು ಅಧಿಕಗೊಳ್ಳುತ್ತಾ ಇದ್ದು, ವೆಚ್ಚದಲ್ಲಿ ಹೆಚ್ಚಳವಾಗಿದೆ. ಇದರ ಜೊತೆಗೆ ಸದರಿ ವಸತಿಗೃಹಗಳ ಗುಣಮಟ್ಟದಲ್ಲಿ ಈ ಕೆಳಕಂಡ ಸುಧಾರಣೆಗಳಾಗಿರುತ್ತದೆ.<br>• ಪ್ರತಿ ಫ್ಲಾಟ್‌ನ ವಿಸ್ತೀರ್ಣ ಕಾಮನ್ ಏರಿಯಾ ಸೇರಿಸಿ ಹೆಚ್ಚಾಗಿರುತ್ತಿದೆ.<br>• ವಸತಿ ಗೃಹಗಳಿಗೆ ಆಧುನಿಕ ಮಾಡ್ಯುಲರ್ ಅಡುಗೆ ಕೋಣೆಯನ್ನು ಅಳವಡಿಸಲಾಗುತ್ತಿದೆ<br>• ಬೆಡ್ ರೂಮ್ ಗಳಲ್ಲಿ ವಾರ್ಡ್ ರೋಬ್ ಗಳನ್ನು ನಿರ್ಮಿಸಿ ಕೊಡಲಾಗುತ್ತಿದೆ.<br>• ಸೋಲಾರ್ ಅಳವಡಿಸಲಾಗುತ್ತಿದೆ.<br>• ಗ್ಯಾಸ್ ಪೈಪ್ ಲೈನ್ ಅನ್ನು ಅಳವಡಿಸಲಾಗುತ್ತದೆ |
| ಈ) | 2030ರ ವೇಳೆಗೆ ಹಂತ ಹಂತವಾಗಿ ವಸತಿ ಸೌಕರ್ಯ ಕಲ್ಪಿಸುವ ಯೋಜನೆಗೆ ಸರ್ಕಾರ ಮೀಸಲಿಟ್ಟಿರುವ ಅಂದಾಜು ಮೊತ್ತ ಎಷ್ಟು? | ಪೊಲೀಸ್ ಗೃಹ 2025 ಯೋಜನೆಗಾಗಿ ರೂ.2000 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಇದುವರೆವಿಗೂ ರೂ.1256.89 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಿದ್ದು, 2026-27ನೇ ಸಾಲಿನ ಆಯವ್ಯಯದಲ್ಲಿ ರೂ. 250.00 ಕೋಟಿಗಳನ್ನು ಒದಗಿಸಲಾಗಿದೆ. |

**ಸಂಖ್ಯೆ:ಹೆಚ್‌ಡಿ 44 ಪಿಬಿಎಲ್ 2025**

(ಡಾ|| ಜಿ. ಪರಮೇಶ್ವರ)
ಗೃಹ ಸಚಿವರು